ಅ) ಕೆ.ಎಂ. ದೊಡ್ಡಿ ಪೋಲೀಸ್ ಠಾಣೆಯಲ್ಲಿ ಈ ಪ್ರಕರಣದ ಬಗ್ಗೆ ಮೊಕದ್ದಮೆ ಸಂಖ್ಯೆ 76 :94 ನ್ನು ದಾಖಲು ಮಾಡಿಕೊಳ್ಳಲಾಗಿದ್ದು, ತನಿಖೆ ನಡೆಸಲಾಗುತ್ತಿದೆ. ಈ ಪ್ರಕರಣ ತನಿಖೆಯನ್ನು ಡಿ.ವೈ.ಎಸ್.ಪಿ. ಮಳವಳ್ಳಿ ಉಪ ವಿಭಾಗ ಇವರಿಗೆ ವಹಿಸಲಾಗಿದೆ.

ಇಗ್ಗಲೂರು ನೀರಾವರಿ ಯೋಜನೆ

587 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಗ್ಗಲೂರು ನೀರಾವರಿ ಯೋಜನೆ ಯಾವಾಗ ಮುಗಿಯತ್ತದೆ, ಹಾಗೂ ಅದಕ್ಕೆ ತಗಲುವ ವೆಚ್ಚ ಹಾಗೂ ಎಷ್ಟು ಎಕರೆ ನೀರಾವರಿಗೆ ಒಳಪಡುವುದು.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಈ ಯೋಜನೆಯನ್ನು 1996-97ನೇ ಸಾಲಿನಲ್ಲಿ ಪೂರ್ಣಗೊಳಿಸುವ ಕಾರ್ಯಕ್ರಮವಿದೆ. ಇದರ ವೆಚ್ಚ 1994-95ನೇ ಸಾಲಿನ ದರಗಳ ಪ್ರಕಾರ 35.19 ಕೋಟಿ ರೂ.ಗಳು ನೀರಾವರಿಗೆ ಒಳಪಡುವುದು 10,000 ಎಕರೆಗಳು.

ಸಣ್ಣ ನೀರಾವರಿ ಇಲಾಖಾ ನೌಕರರ ಸಂಖ್ಯೆ

666 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಣ್ಣ ನೀರಾವರಿ ಇಲಾಖೆಯಲ್ಲಿರುವ ಜೂನಿಯರ್ ಅಸಿಸ್ಟೆಂಟ್, ಅಸಿಸ್ಟೆಂಟ್ ಎಕ್ಸಿಕ್ಯೂಟೀವ್, ಎಕ್ಸಿಕ್ಯೂಟೂವ್ ಸೂಪರಿಂಟೆಂಡೆಂಟ್ ಚೀಫ್ ಇಂಜಿನಿಯರುಗಳ ಒಟ್ಟು ಸಂಖ್ಯೆ ಎಷ್ಟು?

ಆ) ಈ ಇಲಾಖೆಯ ವಿವಿಧ ಇಂಜಿನಿಯರ್‌ರನ್ನು ಹೊರತುಪಡಿಸಿ ಇನ್ನುಳಿದ ಸಿಬ್ಬಂದಿ ನೌಕರರ ಒಟ್ಟು ಸಂಖ್ಯೆ ಎಷ್ಟು?

ಇ) ಈ ಇಲಾಖೆಯ ಎಲ್ಲಾ ನೌಕರರ ಇಂಜನಿಯರುಗಳು ಸೇರಿದಂತೆ 1991-92, 92-93, 93-94, 94-95ರಲ್ಲಿ ಕೊಟ್ಟಿರುವ ವೇತನ ಭತ್ಯಗಳ ಮೊತ್ತವೆಷ್ಟು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ)

ಕಿರಿಯ ಇಂಜನಿಯರ್	-	66
ಆಕೃತಿ ರಚನಕಾರರು	-	27
ಸಹಾಯಕ ಇಂಜನಿಯರ್	-	112
ಸಹಾಯಕ ಕಾರ್ಯಪಾಲಕ ಇಂಜನಿಯರ್	-	31
ಕಾರ್ಯಪಾಲಕ ಇಂಜನಿಯರ್	-	20
ಅಧೀಕ್ಷಕ ಇಂಜನಿಯರ್	-	06
ಮುಖ್ಯ ಇಂಜನಿಯರ್	-	02
		264

ಆ) 316

ಇ)

ವರ್ಷ		ರೂ.
1991-92	-	8,13,07,017-00
1992-93	-	16,15,94,221-00
1993-94	-	13,88,08,399-00